## ಇಷ್ಟಾದರೂ ನಗುವಿರಲಿ

ಸಿರಿ ಕನ್ನಡದಲ್ಲಿ 'ಯುಗಾಂತರ' ಪ್ರಸಾರವಾಗುತ್ತಿದೆ. ಮನೆ ಮಕ್ಕಳೆಲ್ಲ ನೋಡಬಹುದಾದ ಸಾಮಾಜಿಕ ಕಾಳಜಿ ಅದರಲ್ಲಿದೆ. ನಿರ್ದೇಶಕರಿಗೆ ಒಂದು ಮನವಿ. ಆದಷ್ಟು ಬೇಗ ಸದಾಶಿವರಾಯರಿಗೆ ಪಿಂಚಣಿ ಕೊಡಿಸಿ. ವಸುಂಧರಾ ಮೇಡಂಗೆ ಒಂದು ಕೆಲಸ ಕೊಡಿಸಿ. ಅವರ ಮುಖದಲ್ಲಿ ನಗು ಬರಿಸಿ. ನೆಗೆಟಿವ್ ಪಾತ್ರಗಳಿಗೆ ತುಂಬಾ ಒತ್ತು ಕೊಡುತ್ತಿದ್ದೀರಿ. ಬಡವರನ್ನು ಹೇಯವಾಗಿ ಬಿಂಬಿಸಬೇಡಿ. ಅಲ್ಲಲ್ಲಿ ನಗುವಿಗೆ ಅವಕಾಶ ನೀಡಿ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ವೈದ್ಯರ ಸೇವಾ ಪ್ರಹಸನ

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್'ನಲ್ಲಿ ರೋಗಿಗಳಿಂದ ವೈದ್ಯರು ಯಾವ ರೀತಿ ಹಣ ಸುಲಿಗೆ ಮಾಡುತ್ತಾರೆ ಎನ್ನುವುದನ್ನು ಮಕ್ಕಳು ಚೆನ್ನಾಗಿ ಅಭಿನಯಿಸಿ ತೋರಿಸಿದರು. ನಾಟಕವನ್ನು ನೋಡಿ ಸಂತೋಷವಾಯಿತು. 'ಡಾಕ್ಟರ್ ದೇವರ ಸಮಾನ' ಎಂದು ಹೇಳುತ್ತಾರೆ. ಹಣದ ಆಸೆಗಾಗಿ ಬಡವರನ್ನು ದೋಚಬಾರದು. ನಿಸ್ವಾರ್ಥಿಯಾಗಿ ಜನರ ಸೇವೆ ಮಾಡುವುದು ಒಳ್ಳೆಯದು ಎಂಬುದನ್ನು ತಿಳಿಸಿದ ತಂಡಕ್ಕೆ ಧನ್ಯವಾದಗಳು.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

## ಜನೋಪಯೋಗಿ ಸಂದರ್ಶನ

ಚಂದನದ 'ವಾರದ ಅತಿಥಿ' ಕಾರ್ಯಕ್ರಮ ನೋಡಿ ಖುಷಿ ಆಯ್ತು. ಸಾಧಕ ವಿಜಯ ಸಂಕೇಶ್ವರ ಅವರ ಸಂದರ್ಶನ ಪ್ರೇಕ್ಷಕೋಪಯೋಗಿ ಆಗಿತ್ತು. ಅಹಂಕಾರವಿಲ್ಲದೆ ಸಂದರ್ಶಕರ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಮನಬಿಚ್ಚಿ ನೀಡಿದರು. ಅವರ ಜೀವನ ಅನುಭವ ಹಿರಿದು. ಜನಸಾಮಾನ್ಯರಿಗೆ ಮಾರ್ಗದರ್ಶನ ನೀಡುವಂತೆ ಪ್ರಶ್ನೋತ್ತರ ಇತ್ತು. ಎಪ್ಪತ್ತೊಂದರ ಪ್ರಾಯದಲ್ಲೂ ಉದ್ಯಮದಲ್ಲಿ ಕ್ರಿಯಾಶೀಲರಾಗಿದ್ದಾರೆ. ಅಪೂರ್ವ ವ್ಯಕ್ತಿತ್ವದ ಅವರಿಗೆ ಅವರೇ ಸಾಟಿ.

—ನಾರಾಯಣ ಯಾಜಿ, ಶಿರಾಲಿ

## ಭಾವನೆಗಳ ಜೊತೆ ಆಟ

ಕಲರ್ಸ್ ಕನ್ನಡದ 'ಭುವಿ'ಯ ಸ್ವಾಭಿಮಾನ ಅತಿರೇಕವನ್ನು ತಲುಪಿದೆ. ಅದು ಸಮಾಜದಲ್ಲಿ ಗೌರವಯುತವಾಗಿ ಬದುಕಲು ಬೇಕಾದ ಅಗತ್ಯ ಗುಣ. ತನ್ನವರ ಮುಂದೆ ಪ್ರದರ್ಶಿಸೋ ವಸ್ತು ಅದಲ್ಲ. ಹಣದ ಋಣ ಸಂಬಂಧವನ್ನು ಹಾಳು ಮಾಡಿದಂತೆ, ಹಣದ ಲೆಕ್ಕಾಚಾರ ಕೂಡ ಸಂಬಂಧವನ್ನು ಹಾಳುಮಾಡುತ್ತದೆ. ನನ್ನದು–ನಿನ್ನದು ಎಂಬ ಲೆಕ್ಕಾಚಾರ ಶುರುವಾದಾಗ ಮನಸ್ಸುಗಳ ಮಧ್ಯೆ ವಿರೋಧ ಶುರುವಾಗುತ್ತೆ. ಸಂಬಂಧದಲ್ಲಿ ಅಭದ್ರತೆ ಕಾಡುತ್ತೆ. ನಮ್ಮನ್ನ ದೂರದಲ್ಲಿ ಇಟ್ಟಿದ್ದಾರೆ ಅನ್ನೋ ಭಾವನೆ ಬೆಳೆಯುತ್ತೆ. ನಮ್ಮವರು ನಮಗಾಗಿ ಮಾಡೋ ಉಪಕಾರಕ್ಕೆ ಬೆಲೆ ಕಟ್ಟಬಾರದು. ಅವರ ಪ್ರೀತಿ ವಿಶ್ವಾಸ ದೊಡ್ಡದು. ಭುವಿ ಸ್ವಾಭಿಮಾನದ ಹೆಸರಲ್ಲಿ ಹರ್ಷನ ಭಾವನೆಗಳ ಜೊತೆ ಆಟ ಆಡ್ತಿದ್ದಾಳೆ.

—ಮೇಘನಾ ರಘುನಂದನ್

### ವಾರದ ಪತ್ರ

## ದಿಕ್ಕು ತಪ್ಪಿಸುವ ಸುದ್ದಿಗಳು

ದೃಶ್ಯ ಮಾಧ್ಯಮಗಳಲ್ಲಿ ದೂರದರ್ಶನ ಹೊರತುಪಡಿಸಿ ಬಹುತೇಕ ಎಲ್ಲ ವಾರ್ತಾ ವಾಹಿನಿಗಳು ಕೋಮುಗಲಭೆಗಳನ್ನು ವೈಭವೀಕರಿಸಿ ತೋರಿಸುತ್ತಿರುವುದು ಖೇದಕರ. ಇತ್ತೀಚೆಗೆ ರಾಜಕೀಯ ಪಕ್ಷವೊಂದರ ನಾಯಕಿಯೊಬ್ಬರನ್ನು ರೊಚ್ಚಿಗೆಬ್ಬಿಸಿ ಅವರಿಂದ ಅಸಹಿಷ್ಣುತೆಯ ಮಾತುಗಳನ್ನು ಬರುವಂತೆ ಮಾಡಿ ಕೋಮುಸೌಹಾರ್ದಕ್ಕೆ ಕೊಳ್ಳಿ ಇಡುವ ಕೆಲಸ ವಾರ್ತಾ ವಾಹಿನಿಗಳು ಮಾಡಿವೆ.

ಕೆಲವು ವಾಹಿನಿಗಳು ರಾಜಕಾರಣಕ್ಕೆ ಸಂಬಂಧಿಸಿದಂತೆ ಪಕ್ಷಪಾತ ಧೋರಣೆಗಳನ್ನೂ ತಾಳಿವೆ. ಕೆಲವು ರಾಜಕಾರಣಿಗಳು ಸ್ವತಃ ತಮ್ಮದೇ ವಾರ್ತಾ ವಾಹಿನಿಗಳನ್ನು ಹೊಂದಿದ್ದಾರೆ. ಸುದ್ದಿಗಳನ್ನು ಯಥಾವತ್ತು ನೀಡುವುದನ್ನು ಬಿಟ್ಟು, ಬೇರೆ ರೂಪ ನೀಡಿ ದಿಕ್ಕು ತಪ್ಪಿಸುತ್ತಿದ್ದಾರೆ. ವಾರ್ತಾ ವಾಹಿನಿಗಳು ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿವೆ. ಅದರಲ್ಲಿ ಯಾವ ಕಾರ್ಯಕ್ರಮ ಜನರ ಮೆಚ್ಚುಗೆಗೆ ಪಾತ್ರವಾಗಿದೆ ಎಂಬುದೇ ಯಕ್ಷಪ್ರಶ್ನೆ.

—ವಿಜಯಕುಮಾರ್ ಎಚ್.ಕೆ., ರಾಯಚೂರು

## ನೀರ್‌ದೋಸೆ ಟೀವಿಗಲ್ಲ

ಇತ್ತೀಚೆಗೆ ಕಲರ್ಸ್ ಕನ್ನಡದಲ್ಲಿ 'ನೀರ್‌ದೋಸೆ' ಸಿನಿಮಾ ಪ್ರಸಾರವಾಯಿತು. ದತ್ತಣ್ಣ, ಜಗ್ಗೇಶ್ ಮತ್ತು ಹರಿಪ್ರಿಯಾ ನಟಿಸಿರುವ ಈ ಚಿತ್ರ ಮನೆಮಂದಿಯೆಲ್ಲ ನೋಡಲು ಕುಳಿತೆವು. ಚಿತ್ರ ಆರಂಭವಾಗುತ್ತಿದ್ದಂತೆ ನನಗೆ ಆಘಾತವಾಯಿತು. ಇದು ಮನೆಮಂದಿಯೆಲ್ಲ ಒಟ್ಟಿಗೆ ಕೂತು ನೋಡುವ ಸಿನಿಮಾ ಅಲ್ಲ. ಟೀವಿಯಲ್ಲಿ ಇಂತಹ ಸಿನಿಮಾಗಳನ್ನು ಹೇಗೆ ಪ್ರಸಾರ ಮಾಡುತ್ತಾರೆ? ಇಂತಹ ಸಿನಿಮಾವನ್ನು ಇನ್ನೆಂದೂ ಪ್ರಸಾರ ಮಾಡಬೇಡಿ.

—ಡಾ. ಆರ್. ಪೂರ್ಣಿಮಾ, ಬೆಂಗಳೂರು

## ಸಂಸಾರದ ಕಣ್ಣು

ಝೀ ಕನ್ನಡದ 'ಪುನರ್ ವಿವಾಹ'ದ ವಸು ಎಂಬ ಗೃಹಿಣಿಯ ಪಾತ್ರ ಚೆನ್ನಾಗಿದೆ, ನೋಡುಗರಿಗೆ ಆದರ್ಶಪ್ರಾಯವಾಗಿದೆ. ಎಲ್ಲ ಧಾರಾವಾಹಿಗಳಂತೆ ಇಲ್ಲಿಯೂ ಮನೆ ಮುರಿಯುವ ವಿಲನ್‌ಗಳೂ ಇದ್ದಾರೆ. ಸುಮಂಗಲಿಯ ಪಾತ್ರ ಕನ್ನಡದ ಹಳೆಯ ಸಿನಿಮಾಗಳಲ್ಲಿನ ಗಯ್ಯಾಳಿ ಪಾತ್ರ ನಿರ್ವಹಿಸುತ್ತಿದ್ದ ರಮಾದೇವಿ ಅವರನ್ನು ನೆನಪಿಸುತ್ತದೆ. ವಸುವಿನ ಅಕ್ಕ ಪಾವನಿ ತಂಗಿಗೆ ಬೆನ್ನೆಲುಬಾಗಿ ನಿಲ್ಲುತ್ತಾಳೆ. ಕೂಡು ಕುಟುಂಬದಲ್ಲಿ ಗೃಹಿಣಿಯರು ಹೇಗೆ ಸಂಸಾರ ನಿಭಾಯಿಸಬೇಕೆಂಬುದನ್ನು ಧಾರಾವಾಹಿಯಲ್ಲಿ ಚೆನ್ನಾಗಿ ತೋರಿಸಿದ್ದಾರೆ.

—ವೀಕ್ಷಕ, ಬಾಗಲಕೋಟೆ

ಮನೆ ಮುರುಕ ಧಾರಾವಾಹಿಗಳ ನಡುವೆ 'ಪುನರ್‌ವಿವಾಹ'ದಲ್ಲಿ ಒಳ್ಳೆಯ ಸಂದೇಶ ಇದೆ ಎಂದೆನಿಸುತ್ತದೆ. ಸಂಸಾರವನ್ನು ಒಡೆಯದಂತೆ ಎಂತಹ ಸಮಸ್ಯೆ ಎದುರಾದರೂ ಅದನ್ನು ಪರಿಹರಿಸುವ ಕೌಶಲ್ಯವನ್ನು ಇದರಲ್ಲಿ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ.

—ಬಿ.ಕೆ. ಶಿವಕುಮಾರ್, ಬಾಗಲಕೋಟೆ

## ಎಲ್ಲೆ ಮೀರಿದ ಮನರಂಜನೆ

ಕಲರ್ಸ್ ಕನ್ನಡದ 'ರಾಜಾ ರಾಣಿ' ಹಾಗೂ 'ಗಿಚ್ಚಿ ಗಿಲಿಗಿಲಿ' ರಿಯಾಲಿಟಿ ಶೋಗಳು ಸಾಮಾಜಿಕ ನೈತಿಕ ಮೌಲ್ಯಗಳ ಎಲ್ಲೆಯನ್ನು ದಾಟಿ ಅಶ್ಲೀಲತೆಯತ್ತ ಹೊರಳುತ್ತಿವೆ. ದ್ವಂದ್ವಾರ್ಥದ ಸಂಭಾಷಣೆಗೆ ಜೋತುಬಿದ್ದಿವೆ. ಈ ಶೋಗಳು ಖಾಸಗಿ ಬದುಕನ್ನು ಬೀದಿಗೆ ತಂದಿವೆ. ಹಿರಿಯ ದಂಪತಿಗೆ ವೇದಿಕೆಯಲ್ಲಿ ಆಲಂಗಿಸಿ ಎಂದು ಒತ್ತಾಯಿಸುವುದು ಅಸಹ್ಯ ಹುಟ್ಟಿಸುತ್ತದೆ.

ಪತಿ–ಪತ್ನಿಯರ ಪ್ರೇಮ ವೈಯಕ್ತಿಕವಾದದ್ದು. ಅದನ್ನು ಸಾರ್ವಜನಿಕ ಪ್ರದರ್ಶನದ ವಿಷಯವನ್ನಾಗಿಸುವುದು ಎಷ್ಟು ಸರಿ? ಮನರಂಜನೆಯ ಹೆಸರಿನಲ್ಲಿ ಏನು ಮಾಡಿದರೂ ನಡೆಯುತ್ತದೆ ಎಂಬ ಮನೋಭಾವ ಸರಿಯಲ್ಲ. ಸಾಮಾಜಿಕ ಮರ್ಯಾದೆ ಎನ್ನುವುದೂ ಇದೆ. ಅದನ್ನು ಯಾವ ಕಾರ್ಯಕ್ರಮವೂ ಮೀರಬಾರದು.

—ಮುರಲೀಧರ ಕುಲಕರ್ಣಿ, ಬೀದರ್

## ಕಡಿವಾಣ ಅಗತ್ಯ

'ರಾಜ ರಾಣಿ' ಶೋಧ ಪ್ರಹಸನವೊಂದರಲ್ಲಿ ಸಣ್ಣ ಮಗುವನ್ನು ಅತ್ತೆಯ ಪಾತ್ರದಲ್ಲಿ ತೋರಿಸಲಾಯಿತು. ಅದರಲ್ಲಿ ಆ ಮಗು, ಮಗ–ಸೊಸೆಯ ಮೊದಲ ರಾತ್ರಿಯ ದೃಶ್ಯದಲ್ಲಿ ಮುಖ್ಯ ಪಾತ್ರ ವಹಿಸಿತ್ತು. ಅದರ ನಟನೆ ನೋಡಿ ಅಲ್ಲಿ ಕುಳಿತವರು ಬಿದ್ದು ಬಿದ್ದು ನಗುತ್ತಿದ್ದರು. ಮಕ್ಕಳನ್ನು ಮನರಂಜನೆಯ ಹೆಸರಿನಲ್ಲಿ ಹೀಗೆ ಬಳಸಿಕೊಳ್ಳುವುದು ಸರಿಯೇ?

—ಕೆ.ಎಸ್. ಸೋಮೇಶ್ವರ, ಬೆಂಗಳೂರು